
# ವಿವಾದಾತ್ಮಕ ನೊಬೆಲ್ ವಿಜ್ಞಾನಿ



# ಜೇಮ್ಸ್ ವ್ಯಾಟ್ಸನ್



■ ನೇಮಿಚಂದ್ರ

ಇಸವಿ 1982, 'ಭಾರತೀಯ ವಿಜ್ಞಾನ ಮಂದಿರ'ದ ಗ್ರಂಥಾಲಯದಲ್ಲಿ ನನಗೆ ಜೇಮ್ಸ್ ವ್ಯಾಟ್ಸನ್ ಅವರ 'ದಿ ಡಬಲ್ ಹೆಲಿಕ್ಸ್' ಪುಸ್ತಕ ಸಿಕ್ಕಿತ್ತು. ಡಿ.ಎನ್.ಎ. ರಚನೆಯನ್ನು ಕಂಡುಹಿಡಿಯುವತ್ತ ಒಂದು ವೇಗದ ಸ್ಪರ್ಧೆಯೇ ಏರ್ಪಟ್ಟಂತೆ, ಆ ಪಂದ್ಯದಲ್ಲಿ ವ್ಯಾಟ್ಸನ್ ಗೆದ್ದು ಬಂದಂತೆ 'ಡಬಲ್ ಹೆಲಿಕ್ಸ್' ಪ್ರಸ್ತುತಪಡಿಸಿತ್ತು. ಆದರೆ ಇಲ್ಲಿ ನನ್ನ ಗಮನಸೆಳೆದದ್ದು ರೋಸಲಿಂಡ್ ಫ್ರಾಂಕ್ಲಿನ್ ಅವರ ಚಿತ್ರಣ. ಅದಾಗಲೆ ಮೃತಳಾಗಿದ್ದ ರೋಸಲಿಂಡ್ ಅವರನ್ನು ಹಟಮಾರಿ ಹೆಣ್ಣಾಗಿ, ಕೆಟ್ಟ ರೀತಿಯಲ್ಲಿ ಚಿತ್ರಿಸಿದ್ದರು. ಆಕೆಯ ವೇಷಭೂಷಣ, ದಪ್ಪ ಕನ್ನಡಕಗಳನ್ನು ಟೀಕಿಸುತ್ತಾ 'ತುಟಿಗೆ ಬಣ್ಣ ಕೂಡ ಹಚ್ಚದ, ಹೆಣ್ತನವೊಂದೂ ಕಾಣದ ಹೆಣ್ಣೆಂದು' ವ್ಯಾಟ್ಸನ್ ಬಣ್ಣಿಸಿದ್ದರು! ಓರ್ವ ವಿಜ್ಞಾನಿಯನ್ನು ಆತ ನೋಡುವ ಅಸಡ್ಡೆಯ ರೀತಿ ದಿಗ್ಭ್ರಮೆ ಹುಟ್ಟಿಸಿತ್ತು.

1986ರಲ್ಲಿ ಹೊರೇಸ್ ಫ್ರೀಲಾಂಡ್ ಜಡ್ಸನ್ ಅವರ ಲೇಖನ 'ದಿ ಲೆಜೆಂಡ್ ಆಫ್ ರೋಸಲಿಂಡ್' ಓದುವ ಅವಕಾಶ ದೊರೆಯಿತು. 'ಡಿ.ಎನ್.ಎ. ರಚನೆಯನ್ನು ಕಂಡುಹಿಡಿಯುವ ಪಂದ್ಯದಲ್ಲಿದ್ದ ಏಕೈಕ ಮಹಿಳಾ ವಿಜ್ಞಾನಿಯನ್ನು ನೊಬೆಲ್ ಪ್ರಶಸ್ತಿಯಿಂದ ವಂಚಿಸಲಾಯಿತೆ?' ಎಂಬ ಪ್ರಶ್ನೆಯನ್ನು ಜಡ್ಸನ್ ಎತ್ತಿದ್ದರು.

ಜೆನೆಟಿಕ್ ರಂಗದ ಮೂಲ ನಮ್ಮ ದೇಹದ ಪ್ರತಿಯೊಂದು ಜೀವಕೋಶದಲ್ಲಿರುವ, ನಮ್ಮ ವಂಶವಾಹಿಗಳ ನಕಾಶೆಯನ್ನು ಹೊತ್ತ ಡಿ.ಎನ್.ಎ. ರಚನೆಯಲ್ಲಿದೆ. ಪ್ರತಿಭಾವಂತ ವಿಜ್ಞಾನಿ, ಕ್ರಿಸ್ಟಲೋಗ್ರಾಫರ್ ರೋಸಲಿಂಡ್ ಅವರ ಕ್ಷಕಿರಣ ವಿವರ್ತನಾ ಚಿತ್ರಗಳು ಡಿ.ಎನ್.ಎ.ಯ 'ಜೋಡಿ ಸುರುಳಿ' ರಚನೆಯನ್ನು ಕಂಡುಹಿಡಿಯಲು ಮುಖ್ಯ ಸಾಧನವಾಗಿದ್ದವು. ರೋಸಲಿಂಡ್ ಕಟು